ಬದಲಾಯಿಸಿದ್ದರು. ಹಾಗೆ ಬಂದ ಹೊಸದರಲ್ಲಿ ಪರಿಚಯವಾದವರೇ ಅವನು ಇದ್ದ ಬೀದಿಯ ತುದಿ ಮನೆಯ ಶ್ರೀನಿವಾಸ ರಾವ್. ದಿನೇಶ ಆ ಬಡಾವಣೆಗೆ ಬಂದ ಹೊಸದರಲ್ಲಿ, 'ಹಾಯ್ ಮಿಸ್ಟರ್ ಯಂಗ್ ಮ್ಯಾನ್. ಐ ಆ್ಯಮ್ ಶ್ರೀನಿವಾಸ್' ಅಂತ ಪರಿಚಯ ಮಾಡಿಕೊಂಡು ಮನೆಯ ಒಳಗೆ ಬರ್ಲಿಕ್ಕೆ ನೋಡಿದ್ದರು. ದಿನೇಶ ಮೊದಲೇ ಅಂಥ ಮಾತುಗಾರ ಅಲ್ಲ. ಸಂಬಂಧ ಪಡದೇ ಇದ್ದ ವ್ಯಕ್ತಿ ಮನೆಯ ಒಳಗೆ ನುಗ್ಗುವುದು ಅವನಿಗೆ ಸ್ವಲ್ಪವೂ ಇಷ್ಟ ಆಗಲಿಲ್ಲ. ಗೇಟಿನಲ್ಲಿಯೇ ಮಾತಾಡಿ ಆಚೆ ಕಳಿಸ್ಬೇಕು ಅಂತ ಪ್ರಯತ್ನ ಪಡ್ತಾ ಇದ್ದ. ಆದರೆ, ಸ್ನೇಹಾ ಮಾತ್ರ, 'ಅಯ್ಯೋ ಅಜ್ಜ ಬಾಗಿಲಲ್ಲೇ ನಿಂತಿದ್ದೀರಲ್ವಾ? ಒಳಗೆ ಬನ್ನಿ' ಅಂತ ಕರೆದಿದ್ದಳು. ಅಲ್ಲಿಂದ ಸುರುವಾಯಿತು ಶ್ರೀನಿವಾಸ ರಾಯರ ಪ್ರವೇಶ. 'ನಾನು ರಿಟೈರ್ಡ್ ಡ್ರಾಯಿಂಗ್ ಟೀಚರ್. ನಂಗೆ ಇಬ್ರು ಗಂಡು ಮಕ್ಳು. ಒಬ್ಬ ಲಂಡನ್ನಿನಲ್ಲಿ. ಇನ್ನೊಬ್ಬ ಕೆನಡಾದಲ್ಲಿ. ಹೆಂಡತಿಗೆ ಅಷ್ಟೇನೂ ಹುಷಾರು ಇರೂದಿಲ್ಲ. ಹಾಗಾಗಿ, ಅವಳು ಅವಳ ತಮ್ಮನ ಮನೆಯಲ್ಲಿಯೇ ಹೆಚ್ಚಾಗಿ ಇರ್ತಾಳೆ. ಇಲ್ಲಿ ನಾನೊಬ್ಬನೇ ಇರೂದು. ನಂಗೆ ಬೇಜಾರಾದಾಗ ಎಲ್ಲ ನಿಮ್ಮ ಹತ್ರ ಮಾತಾಡ್ಲಿಕ್ಕೆ ಬರ್ತೇನೆ. ಆಗ್ಬಹುದಾ?' ಅಂತ ಕೇಳಿದ್ದರು. ದಿನೇಶ ಅವರ ಮಾತನ್ನು ಕೇಳಿಯೇ ಮುಖ ಗಂಟು ಹಾಕಿಕೊಂಡಿದ್ದ. 'ನಂಗೆ ಕಾಲೇಜಿನಲ್ಲಿ ಕಂಡಾಬಟ್ಟೆ ಕೆಲಸ ಇರ್ತದೆ. ಸಂಜೆ ಬರುವಾಗಲೇ ಸಾಕಾಗಿ ಹೋಗಿರ್ತದೆ. ಸಂಡೇ ನಂಗೆ ಸ್ವಲ್ಪ ಫ್ರೀ ಇರ್ಬೇಕು ಅಂತ ಅನಿಸ್ತದೆ.' ಅಂತ ಹೇಳಿ, ನೀವು ಹಾಗೆಲ್ಲ ಬರೂದು ನಂಗೆ ಇಷ್ಟ ಇಲ್ಲ ಎನ್ನುವುದನ್ನು ಪರೋಕ್ಷವಾಗಿ ಹೇಳಿದ್ದ. ಆದರೆ, ಸ್ನೇಹಾ, 'ಅಯ್ಯೋ ಅಜ್ಜಾ... ನಾನು ಒಬ್ಳೇ ಮನೆಯಲ್ಲಿ ಭೂತದ ಹಾಗೆ ಇರ್ತೇನೆ. ನೀವು ಯಾವಾಗ ಬೇಕಾದ್ರೂ ಬನ್ನಿ, ಮಾತಾಡಿ ಅದಕ್ಕೆ ಏನು ದುಡ್ಡು ಕೊಡ್ಬೇಕಾ?' ಅಂತ ಹೇಳಿದಳು. ಆದರೆ, ಶ್ರೀನಿವಾಸ ರಾಯರಿಗೆ ಸ್ವಲ್ಪ ನಿರಾಸೆ ಆಯಿತು ದಿನೇಶನ ವರ್ತನೆ ನೋಡಿ. 'ಇರ್ಲಿ ಬಿಡಿ... ಹೀಗೇ ಹೊರಗಡೆ ಸಿಕ್ಕಿದಾಗ ಮಾತಾಡುವ ಸಾಕು' ಅಂದಿದ್ದರು ಪೆದ್ದು ಪೆದ್ದಾಗಿ ನಗುತ್ತ.

ಅದೊಂದು ದಿನ ದಿನೇಶನಿಗೆ ಸ್ವಲ್ಪ ತಲೆ ತಿರುಗಿದ ಹಾಗೆ ಆಗಿತ್ತು. ಕಾಲೇಜಿಗೆ ರಜೆ ಹಾಕಿ ಬಂದಿದ್ದ. ಹೆಂಡತಿ ಗಾಬರಿಯಿಂದ ಡಾಕ್ಟ್ರಿಗೆ ತೋರಿಸಿದಾಗ ಎಲ್ಲ ಚೆಕಪ್ ಮಾಡಿ, 'ಕೊಲೆಸ್ಟ್ರಾಲ್ ಸ್ವಲ್ಪ ಜಾಸ್ತಿ ಆಗಿದೆ. ಶುಗರ್ ಕೂಡ ಮಾರ್ಜಿನ್‌ಗಿಂತ ಮುಂದೆ ಹೋಗುವ ಲಕ್ಷಣ ಕಾಣ್ತಾ ಉಂಟು. ಸ್ವಲ್ಪ

